(ಮಾನ್ಯ ಸದಸ್ಯರುಗಳು ಯಾರೂ ವಿರೋಧ ವ್ಯಕ್ತ ಪಡಿಸಿಲ್ಲ)

ಅಧ್ಯಕ್ಷರು.—ಗೈರು ಹಾಜರಾಗಲು ಶ್ರೀ ಆರ್, ಟಿ. ದೇಸಾಯಿಯವರಿಗೆ ಅನುಮತಿಯನ್ನು ನೀಡಲಾಗಿದೆ.

ಈಗ ಮಾನ್ಯ ಕೈಗಾರಿಕಾ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಜೆ. ಹೆಚ್, ಪಟೇಲ್ (ವಿದ್ಯುತ್ ಮತ್ತು ಕೈಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ನನ್ನ ಸ್ಟೇಟ್‌ಮೆಂಟ್ ಇಂಗ್ಲೀಷ್‌ನಲ್ಲಿದೆ. ಇದನ್ನು ಕನ್ನಡಕ್ಕೆ ಅನುವಾದ ಮಾಡಿಲ್ಲ. ಅದಕ್ಕಾಗಿ ತಮ್ಮ ಕ್ಷಮೆ ಕೇಳಿ ಇಂಗ್ಲೀಷ್‌ನಲ್ಲಿರುವುದನ್ನು ಈಗ ಓದುತ್ತೇನೆ.—

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ನಾರಾಯಣಕುಮಾರ್ ಅವರು ಇದಕ್ಕೆ ಏನು ಹೇಳುತ್ತಾರೆ ?

ಶ್ರೀ ಜಿ. ನಾರಾಯಣಕುಮಾರ್.—ನಾವು ಕನ್ನಡದಲ್ಲಿ ಆಡಳಿತ ನಡೆಸುತ್ತೇವೆಂದು ಜನರಿಗೆ ಹೇಳಿದ್ದೇವೆ. ಆದ್ದರಿಂದ ಮಾನ್ಯ ಮಂತ್ರಿಗಳು ಕನ್ನಡದಲ್ಲಿಯೇ ಹೇಳಬೇಕು.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಮಾನ್ಯ ಮಂತ್ರಿಗಳು ಅದು ಕನ್ನಡಕ್ಕೆ ಅನುವಾದ ಆಗಿಲ್ಲ ವೆಂದು ಈಗಾಗಲೇ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರ ಕಾಪೀಸ್‌ನ್ನು ತಾವು ನಮಗೆ ಒದಗಿಸಬೇಕು.

ಅಧ್ಯಕ್ಷರು.—ಆಗಲಿ.

ಮಂತ್ರಿಗಳ ಹೇಳಿಕೆ

ರಾಜ್ಯದ ವಿದ್ಯುತ್ ಸರಬರಾಜಿನ ಬಗ್ಗೆ

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಪವರ್ ರಿಪ್ಯೂ ಕಮಿಟಿಯವರು ದಿನಾಂಕ ೩೧-೮-೧೯೮೭ರಂದು ಸಭೆ ಸೇರಿ ವಿದ್ಯುತ್ ಸರಬರಾಜಿನ ಬಗ್ಗೆ ಕೈಕೊಂಡ ತೀರ್ಮಾನವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.—

"The Power Review Committee meeting was held on 31st August 1987. The latest assement of availability of power till the on-set of monsoons (June 88) is about 27 million units per day. This availability is, after having made considerable efforts with Maharashtra and also receiving full share of Karnataka from the Central generating stations. Government of India have allotted 6 per cent of the 15 per cent unallocated power to Karntaka. Unfortunately the hydro reservoirs have now storage of just 33 per cent of the total capacity and in a normal year both Sharavathi and Supa reservoirs would have filled up. The unrestricted requirement of power is estimated to be 46 million units per day as against the availatility of 27 million units per day. The consnmption at present level of cuts is 31 million units per day.

It is, therefore, necessary that everyone in the State shares the deficit in some form of the other. Keeping all these factors in

view, Government have decided that the power cuts should be enhanced as follows with immediate effect.—

	Category	Present level of cuts (%)	Revised level of cuts (%)
1	A.E.H.	25	35
2	LT Power	20	30
3	Commercial lighting	35	45
4	Domestic lighting	—	10
5	HT unrestricted category	10	20
6	100 to 250 KVA	20	30
7	251 to 1000 KVA	40	50
8	1000 to 5000 KVA	50	60
9	5001 and above	70	80
10	Textiles. fertilisers & newsprint.	30	40

It is also considered absolutely essential to conserve power and to limitthe usageto the availabilty, all rural feeders will be supplied with power between 2.00 PM and 6.00 AM only, Public lighting like streetlighting also will be restricted between 7.00 PM and 6.00 AM only

Government appeals to every consumer through this House that it has become necessary to practice austerity measures owing to the unprecedented failure of monsoons.

An appeal is also being made to employees of K.E.B.to recognise the grave situation and come forward to save electricity and also try to assist K.E.B. in all efforts including mobilisation of resources It has to be mentioned that with all these meacures, it is necessary to review the power situation again by the middle of December 1987 and take such corrective measures as would be necessary.

ಅಧ್ಯಕ್ಷರು.— ಈಗ ಮಾನ್ಯ ಮೊಯ್ಲಿ ಅವರು ಕೊಟ್ಟಿರುವಂತಹ ನಿಲುವಳಿ ಸೂಚನೆ ಬಗ್ಗೆ ಏನಾದರೂ ಹೇಳುವುದಿದ್ದರೆ ಹೇಳಬಹುದು.

ನಿಲುವಳಿ ಸೂಚನೆ

ಮಂಗಳೂರು ರಸಗೊಬ್ಬರ ಕಾರ್ಖಾನೆ ಮುಚ್ಚಿರುವುದು

(ಮುಂದೆಗೆ ಅನುಮತಿ ಕೋರಿಕೆ)

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿರುವಂತಹ ರಸಗೊಬ್ಬರದ ಕಾರ್ಖಾನೆ ಕಳೆದ ಜುಲೈ ಒಂದರಿಂದ ನಡೆಯುತ್ತಿಲ್ಲ. ಇದರಿಂದ ಒಂದೊಂದು ದಿವಸದ ಉತ್ಪಾದನೆ...